BENNETT, COLEMAN & CO. LTD. | ESTABLISHED 1838 | TIMESOFINDIA.COM | EPAPER.TIMESOFINDIA.COM MANGALURU | WEDNESDAY, DECEMBER 19, 2018 | PAGES 24 | PRICE ₹4.50

# THE TIMES OF INDIA

INDIA'S LARGEST ENGLISH NE

INCLUDES *4 PAGES OF MANGALORE TIMES (*MANGALURU, MANIPAL AND UDUPI CITY AREAS ONLY)

birac®

*Ignite Innovate Incubate*

**2nd Call**

# ACCELERATING ENTREPRENEURS (AcE) FUND



## BIRAC invites proposals from Private Funds registered with Securities and Exchange Board of India (SEBI)

**Biotechnology Innovation Fund - AcE** is an equity "**Fund of Funds**" created exclusively to partner with SEBI registered private funds to invest equity in Biotech start-ups for providing the risk capital to undertake innovation, research and product development.

Details available on **www.birac.nic.in**

**Applications may be submitted latest by**

**20th January, 2019 (5:30 pm)**

**Biotechnology Industry Research Assistance Council (BIRAC)**

**(A Govt. of India Enterprise)**

**E-mail: sped.birac@gov.in & sped3.birac@nic.in**

ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ನಿಮ್ಮ ಕರಾವಳಿ ಭಾಗದ ಹೆಚ್ಚೆಚ್ಚು ಸುದ್ದಿಗಳ ಮಿಂಚಿನ ವೇಗದ ಬ್ರೇಕಿಂಗ್ ಅಪ್‌ಡೇಟ್‌ಗಳು ಇದೀಗ ನಿಮ್ಮ ಬೆರಳತುದಿಯಲ್ಲಿ!
ನಮ್ಮ ನ್ಯೂಸ್ ಆ್ಯಪ್ ಅನ್ನು
ಇಂದೇ ಡೌನ್‌ಲೋಡ್ ಮಾಡಿಕೊಳ್ಳಿ!
udayavani.com

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ

KAS
BATCH STARTS
PRELIMS CUM M
ENGLISH &
FREE ORIE
on Sunday 23r
Kannada Optiona
ACE IAS
KARNIRE-ACE CIVIL SERVICE ACADE
4th Floor, Lulu Center, Falnir, Mangalo

Regd.No.UDP/1259/2018-20 | udayavani.com | UDAYAVANI – KANNADA DAILY – MANIPAL ಮಣಿಪಾಲ, ಬುಧವಾರ, ಡಿಸೆಂಬರ್ 19, 2018 ಬೆಲೆ: ₹ 5-00 ವಿದೇಶ ಬೆಲೆ: ₹ 6-00 ಪುಟಗಳು 1

## ಡಾ। ಸರೋಜಿನಿ ಮಹಿಷಿ ವರದಿ ಶಿಫಾರಸಿನಂತೆ ಅರ್ಹ ಕನ್ನಡಿಗರ ಆಯ್ಕೆ

# ಕಾಲೇಜುಗಳಲ್ಲಿ ಕನ್ನಡಿಗರಿಗೆ ಕೆಲಸ ಕಡ್ಡಾಯ

■ ರಾಜು ಖಾರ್ವಿ ಕೊಡೇರಿ

ಬೆಂಗಳೂರು, ಡಿ. 18: ಡಾ। ಸರೋಜಿನಿ ಮಹಿಷಿ ವರದಿ ಶಿಫಾರಸಿನಂತೆ ರಾಜ್ಯದ ಖಾಸಗಿ ಎಂಜಿನಿಯರಿಂಗ್ ಹಾಗೂ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಇನ್ನು ಮುಂದೆ ವಿವಿಧ ಹುದ್ದೆಗಳಿಗೆ ನಿರ್ದಿಷ್ಟ ಪ್ರಮಾಣದಲ್ಲಿ ಕನ್ನಡಿಗರನ್ನು ಕಡ್ಡಾಯವಾಗಿ ನೇಮಿಸಿಕೊಳ್ಳಬೇಕು.

ರಾಜ್ಯದಲ್ಲಿ 202 ಖಾಸಗಿ ಎಂಜಿನಿಯರಿಂಗ್ ಹಾಗೂ 196 ಖಾಸಗಿ ಪಾಲಿಟೆಕ್ನಿಕ್ ಕಾಲೇಜುಗಳು ಅಸ್ತಿತ್ವದಲ್ಲಿವೆ. ಗ್ರಾಮೀಣ ಭಾಗದಲ್ಲಿರುವ ಖಾಸಗಿ ಎಂಜಿನಿಯರಿಂಗ್ ಹಾಗೂ ಪಾಲಿಟೆಕ್ನಿಕ್ ಕಾಲೇಜುಗಳ ನಾನಾ ಹುದ್ದೆಗಳಲ್ಲಿ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಸರಕಾರದ ನಿಯಮ ಉಲ್ಲಂಘಿಸಿದ ಸಂಸ್ಥೆಗಳ ವಿರುದ್ಧ ಕಠಿನ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ತಾಂತ್ರಿಕ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. ವರದಿ ಶಿಫಾರಸಿನಂತೆ 'ಎ' ವೃಂದದ ಹುದ್ದೆಗಳಲ್ಲಿ ಶೇ.65 ಕನ್ನಡಿಗರಿಗೆ ಮೀಸಲಿಡಬೇಕು. ಇದರನ್ವಯ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರು, ಸಹ ಪ್ರಾಧ್ಯಾಪಕರು, ಅಕಾಡೆಮಿಕ್ ಸದಸ್ಯ, ವಿಭಾಗದ ಮುಖ್ಯಸ್ಥರು, ವರ್ಕ್‌ಶಾಪ್ ಸೂಪರಿಂಟೆಂಡೆಂಟ್ ಹಾಗೂ ಆಡಳಿತಾಧಿಕಾರಿ ಕನ್ನಡಿಗರೇ ಆಗಿರಬೇಕು.

▸ ಪುಟ -5

ಶಿಕ್ಷಣ

### ಅರ್ಹ ಕನ್ನಡಿಗರು ಯಾರು?

ಕನ್ನಡ ಓದಲು ಅಥವಾ ಬರೆಯಲು ಬಲ್ಲವರನ್ನು ಆಯ್ಕೆ ಮಾಡಿಕೊಂಡು ಕನ್ನಡಿಗರು ಎಂದು ಹೇಳಲು ಸಾಧ್ಯವಿಲ್ಲ. ಸರೋಜಿನಿ ಮಹಿಷಿ ವರದಿ ಶಿಫಾರಸಿನಂತೆ ಇಲಾಖೆ ನೀಡಿರುವ ಮಾನದಂಡದ ಪ್ರಕಾರ ಕನ್ನಡ ಭಾಷೆಯನ್ನು ಓದಲು, ಬರೆಯಲು, ಮಾತನಾಡಲು ಹಾಗೂ ಕನ್ನಡವನ್ನು ಚೆನ್ನಾಗಿ ಆಲಿಸಿ ಅರ್ಥಮಾಡಿಕೊಳ್ಳಬಲ್ಲರಿಗೆ ಹುದ್ದೆಗಳನ್ನು ನೀಡಬೇಕು ಎಂದು ತಿಳಿಸಿದೆ.

### ಶಿಕ್ಷಣ ಸಂಸ್ಥೆಗಳಿಗೆ ಎಚ್ಚರಿಕೆ

ಡಿ.22ರೊಳಗಾಗಿ ಸಂಸ್ಥೆಯ ನೌಕರರ ವರ್ಗದ ಮಾಹಿತಿಯನ್ನು ಕಡ್ಡಾಯವಾಗಿ ತಾಂತ್ರಿಕ ಶಿಕ್ಷಣ ಇಲಾಖೆಗೆ ನೀಡಬೇಕು. ನಿಯಮ ಉಲ್ಲಂಘಿಸುವ ಎಂಜಿನಿಯರಿಂಗ್ ಕಾಲೇಜುಗಳ ಪ್ರವೇಶಾನುಮೋದನೆ ಮತ್ತು ವಾರ್ಷಿಕ ಸಂಯೋಜನೆಯನ್ನು ತಡೆ ಹಿಡಿಯಲಾಗುತ್ತದೆ ಎಂದು ತಾಂತ್ರಿಕ ಶಿಕ್ಷಣ ಇಲಾಖೆ ನಿರ್ದೇಶಕರು ಎಲ್ಲ ಖಾಸಗಿ ಎಂಜಿನಿಯರಿಂಗ್ ಹಾಗೂ ಪಾಲಿಟೆಕ್ನಿಕ್ ಸಂಸ್ಥೆಗಳಿಗೆ ಎಚ್ಚರಿಕೆ ನೀಡಿದ್ದಾರೆ.

# ಕನ್ನಡಿಗರಿಗೆ ಕೆಲಸ ಕಡ್ಡಾಯ

(ಒಂದನೇ ಪುಟದಿಂದ)

ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಪ್ರಾಂಶುಪಾಲರು ಮತ್ತು ಆಡಳಿತಾಧಿಕಾರಿ ಹುದ್ದೆಯನ್ನು ಕನ್ನಡಿಗರಿಗೆ ಮೀಸಲಿಡಬೇಕು ಎಂದು ಸೂಚನೆ ನೀಡಿದೆ.

'ಬಿ' ಗ್ರೂಪ್ ಹುದ್ದೆಗಳಲ್ಲಿ ಶೇ.80ರಷ್ಟು ಹುದ್ದೆ ಕನ್ನಡಿಗರಿಗೆ ನೀಡಬೇಕು. ಎಂಜಿನಿಯರಿಂಗ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕ, ವರ್ಕ್‌ಶಾಪ್ ಸೂಪರಿಂಟೆಂಡೆಂಟ್, ಫೋರ್‌ಮನ್, ಕುಲಸಚಿವರು, ಸಿಸ್ಟಂ ಅನಾಲಿಸ್ಟ್, ದೈಹಿಕ ಶಿಕ್ಷಣ ನಿರ್ದೇಶಕರು ಮತ್ತು ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಉಪನ್ಯಾಸಕರು, ಕುಲಸಚಿವರು ಮತ್ತು ಫೋರ್‌ಮನ್ ಹುದ್ದೆಯನ್ನು ಕನ್ನಡಿಗರಿಗೆ ನೀಡಬೇಕಿದೆ.

'ಸಿ' ವೃಂದದ ಹುದ್ದೆಗಳಲ್ಲಿ ಶೇ.100ರಷ್ಟು ಕನ್ನಡಿಗರನ್ನು ನೇಮಿಸಿಕೊಳ್ಳಬೇಕು. ಎಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ಕಾಲೇಜಿನ ಕಚೇರಿ ಅಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು, ಬೆರಳಚ್ಚುಗಾರರು, ಶೀಘ್ರಲಿಪಿಗಾರರು, ಬೋಧಕರು, ಸಹಬೋಧಕರು ಮತ್ತು ಮೆಕಾನಿಕ್‌ಗಳು ಕನ್ನಡದವರೇ ಆಗಿರಬೇಕು. ಎಂಜಿನಿಯರಿಂಗ್ ಹಾಗೂ ಪಾಲಿಟೆಕ್ನಿಕ್ ಕಾಲೇಜಿನಲ್ಲಿ 'ಡಿ' ದರ್ಜೆಯ ಹುದ್ದೆಗಳಲ್ಲಿ ಕಚೇರಿ ಸಹಾಯಕ, ಸೇವಕ, ಸ್ವೀಪರ್ (ಕಸಗುಡಿಸುವವರು) ಮತ್ತು ಕಾವಲುಗಾರರಹುದ್ದೆಯನ್ನೂಕಡ್ಡಾಯವಾಗಿ ಕನ್ನಡಿಗರಿಗೇ ನೀಡಬೇಕು.